423 (494) ಶ್ರೀ ಆರ್ ರೋಷನ್‌ಬೇಗ್ (ಜಯಮಹಲ್) ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ **ಸಚಿವರು** ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಕರ್ನಾಟಕ ರಾಜ್ಯದಲ್ಲಿ ವರದಿಗೊಂಡಿರುವ ಕಾಣೆಯಾದ ಮಕ್ಕಳ ಸಂಖ್ಯೆ ಎಷ್ಟು,

ಆ) ರಾಜ್ಯದಲ್ಲಿ 4000 ಮಕ್ಕಳು ಕಾಣೆಯಾಗಿರುವುದು ಸತ್ಯವೇ, (ವಿವರಗಳನ್ನು ಒದಗಿಸುವುದು),

ಇ) ಅವರುಗಳಲ್ಲಿ ಎಷ್ಟು ಮಕ್ಕಳು ಲೈಂಗಿಕ ದೌರ್ಜನ್ಯ ಹಾಗೂ ಕೊಲೆಯ ಪ್ರಕರಣಗಳಿಗೆ ಒಳಗಾಗಿ ವರದಿಯಾಗಿರುತ್ತಾರೆ,

ಈ) ಕಾಣೆಯಾದ ಮಕ್ಕಳನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮ?

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯಹಾರಗಳ ಸಚಿವರು)

ಅ) ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ 2005,2006 ಮತ್ತು 2007ನೇ ಸಾಲಿನಲ್ಲಿ ಕಾಣೆಯಾಗಿರುವ ಮಕ್ಕಳ ಸಂಖ್ಯೆ ಈ ಕೆಳಗಿನಂತಿದೆ

ವರ್ಷ	ರಾಜ್ಯದಲ್ಲಿ	ಬೆಂಗಳೂರು ನಗರದಲ್ಲಿ
2005	3078	2023
2006	3460	2121
2007(ಜನವರಿ 31)	307	189
ಒಟ್ಟು	6845	4333

ಆ) ಉತ್ತರವನ್ನು ಪ್ರಶ್ನೆ ಅ ರಲ್ಲಿ ವಿವರಿಸಲಾಗಿದೆ

ಇ) ಮಕ್ಕಳ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಹಾಗೂ ಕೊಲೆ ಪ್ರಕರಣಗಳ ವಿವರ

ವರ್ಷ	ಲೈಂಗಿಕ ದೌರ್ಜನ್ಯಗಳು	ಕೊಲೆ ಪ್ರಕರಣಗಳು
2005	8	9
2006	10	11
2007(ಜನವರಿ)	0	03
ಒಟ್ಟು	18	23